**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕುಂದಾಪುರ**

**ಅಸಲು ದಾವೆ ಸಂಖ್ಯೆ:237/2015**

**ಡಿಡಬ್ಲ್ಯೂ-1**

**ದಿನಾಂಕ:14-07-2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನ ಭೋದಿಸಲಾಯಿತು**

**ಪಾಟಿ ಸವಾಲು: ವಾದಿ ಪರ ವಕೀಲರಾದ ಶ್ರೀ ಎಮ್.ಜೆ.ಎಸ್.ರವರಿಂದ**

ಈ ದಾವೆಯಲ್ಲಿ ಲಿಖಿತ ಪತ್ರವನ್ನು ಸಲ್ಲಿಸಲು ನಾನೇ ಮಾಹಿತಿಯನ್ನು ನೀಡಿದ್ದೇನೆ. ನಾನು ವೈಯಕ್ತಿಕವಾಗಿ ಮಾಹಿತಿಯನ್ನು ನೀಡಿದ್ದೇನೆ, ನಾನು ಬೇರೆಯವರಿಂದ ಮಾಹಿತಿಯನ್ನು ಪಡೆದುಕೊಂಡಿಲ್ಲ. ಈ ದಾವೆಯನ್ನು ಮಧುಕರ ಹೆಗಡೆರವರು ಹೂಡಿದ್ದಾರೆ. ಅವರ ಪರಿಚಯ ನನಗೆ ಇದೆ. ಈ ದಾವೆಯಲ್ಲಿ ಅವರು ಮಾಡಿರುವ ಸಾಧನೆಯನ್ನು ತಿಳಿದುಕೊಂಡಿದ್ದೇನೆ. ಈ ದಾವೆಗೆ ಸಂಬಂಧಿಸಿದ ದಾಖಲೆಯನ್ನು ನೋಡಿದ್ದೇನೆ. ಈ ದಾವೆಗೆ ಸಂಬಂಧಪಟ್ಟ ಪಹಣಿ ಪತ್ರಿಕೆ ಮತ್ತು ಕ್ರಯ ಸಾಧನವನ್ನು ನೋಡಿದ್ದೇನೆ. ಈ ದಾವೆಗೆ ಸಂಬಂಧಪಟ್ಟ ಪಹಣಿ ಪತ್ರಿಕೆಯನ್ನು **1982-1983** ನೇ ಇಸವಿಯಲ್ಲಿ ನೋಡಿದ್ದೇನೆ. ಸಾಕ್ಷಿಯು ಮುಂದುವರೆದು **1982-1983** ನೇ ಇಸವಿಯಲ್ಲಿ ನನ್ನ ತಂದೆಯವರು ಪಹಣಿ ಪತ್ರಿಕೆಯನ್ನು ನೋಡಿದ್ದಾರೆ, ನಾನು **2006** ನೇ ಇಸವಿಯಲ್ಲಿ ನೋಡಿದ್ದೇನೆ ಎಂದು ನುಡಿಯುತ್ತಾರೆ. ನಾನು ತಾಲೂಕು ಕಚೇರಿಯಿಂದ ದಾವಾ ಎ ಶೆಡ್ಯೂಲ್ ಸ್ವತ್ತಿನ ಪಹಣಿ ಪತ್ರಿಕೆಯನ್ನು ಪಡೆದುಕೊಂಡಿದ್ದೇನೆ. ನನ್ನ ಸ್ವಂತ ಉದ್ದೇಶಕ್ಕೆ ಪಹಣಿ ಪತ್ರಿಕೆಯನ್ನು ಪಡೆದುಕೊಂಡಿದ್ದೇನೆ. **2006** ನೇ ಇಸವಿಯಲ್ಲಿ ನಾನು ಪಹಣಿ ಪತ್ರಿಕೆಯನ್ನು ಪಡೆದಾಗ ವಾದಿಯ ಹೆಸರು ನಮೂದಾಗಿತ್ತು. **2006** ನೇ ಇಸವಿಯಲ್ಲಿ ಪಹಣಿ ಪತ್ರಿಕೆಯನ್ನು ಪಡೆದಾಗ ವಾದಿಯ ಹೆಸರು ಸ್ವಾಧೀನಗಾರ ಮತ್ತು ಹಕ್ಕುದಾರರೆಂದು ನಮೂದಾಗಿತ್ತು. ದಾವಾ ಆಸ್ತಿಗೆ ಸಂಬಂಧಿಸಿದ ಕ್ರಯ ಸಾಧನವನ್ನು **2006** ನೇ ಇಸವಿಯಲ್ಲಿ ನೋಡಿದ್ದೇನೆ. ಸದ್ರಿ ಕ್ರಯ ಸಾಧನದಲ್ಲಿ ದಾವಾ ಎ ಶೆಡ್ಯೂಲ್ ಸ್ವತ್ತನ್ನು ಗುಲಾಬಿ ಹೆಗಡೆ ನನ್ನ ತಂದೆಯವರಿಗೆ ಮಾರಾಟ ಮಾಡಿದ್ದಾರೆ ಎಂದು ಕಂಡು ಬಂತು. **1982-1983** ನೇ ಇಸವಿಯಲ್ಲಿ ದಾವಾ ಎ ಶೆಡ್ಯೂಲ್ ಆಸ್ತಿಯನ್ನು ಖರೀದಿ ಮಾಡಿದ್ದಾರೆ. ಸದ್ರಿ ಕ್ರಯ ಪತ್ರವನ್ನು ಕುಂದಾಪುರ ನೋಂದಾವಣಾಧಿಕಾರಿ ಕಚೇರಿಯಲ್ಲಿ ನೋಂದಾಯಿಸಲಾಗಿದೆ. ಸದ್ರಿ ಕ್ರಯದ ಮೂಲ ದಾಖಲೆ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ನೋಡಿದ ದಾವಾ ಎ ಶೆಡ್ಯೂಲ್ ಕ್ರಯ

ಪತ್ರದಲ್ಲಿ ಗುಲಾಬಿ ಹೆಗಡೆಯವರಿಂದ ನನ್ನ ತಂದೆ ಖರೀದಿ ಮಾಡಿದ್ದು ಕಂಡು ಬರುತ್ತದೆ. ಸದ್ರಿ ಕ್ರಯ ಪತ್ರದ ಪ್ರಕಾರ ಪಹಣಿ ಪತ್ರಿಕೆ ಬದಲಾವಣೆಯಾಗಲಿಲ್ಲ. **2006-2007** ನೇ ಇಸವಿಯಲ್ಲಿ ನನ್ನ ತಂದೆಯ ಹೆಸರಿಗೆ ದಾವಾ ಎ ಶೆಡ್ಯೂಲ್ ಸ್ವತ್ತಿನ ಪಹಣಿ ಪತ್ರಿಕೆ ಬದಲಾವಣೆಯಾಗಿಲ್ಲ ಎಂದು ಗೊತ್ತಾಯಿತು. **2006-2007** ನೇ ಇಸವಿಯಲ್ಲಿ ಪಹಣಿ ಪತ್ರಿಕೆ ಬದಲಾವಣೆಗೆ ನಾನು ಅರ್ಜಿಯನ್ನು ನೀಡಲಿಲ್ಲ. ದಾವೆಯಲ್ಲಿ ಲಿಖಿತ ಪತ್ರವನ್ನು ಸಲ್ಲಿಸುವಾಗ, ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವಾಗ ಮತ್ತು ನಿ.ಪಿ.**5** ರಂತೆ ಉತ್ತರ ನೀಡುವಾಗ ನನ್ನ ತಂದೆಯವರು ದಾವಾ ಎ ಶೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿದ್ದಾರೆ ಎಂದು ಹೇಳಿದ್ದೇನೆ. ಈ ದಾವೆಯಲ್ಲಿ ಕ್ರಯಮೂಲ ಹಕ್ಕನ್ನು ಹೊರತುಪಡಿಸಿ ಬೇರೆ ಯಾವುದೇ ಹಕ್ಕು ನನಗೆ ಇಲ್ಲ.

ದಾವಾ ಎ ಶೆಡ್ಯೂಲ್ ಸ್ವತ್ತನ್ನು ಬಲತ್ಕಾರವಾಗಿ, ಅಕ್ರಮವಾಗಿ ಸ್ವಾಧೀನ ಪಡೆದುಕೊಂಡಿದ್ದೇನೆ ಎಂದು ನನ್ನ ವಕೀಲರಿಗೆ ಹೇಳಲಿಲ್ಲ. ದಾವಾ ಎ ಶೆಡ್ಯೂಲ್ ಸ್ವತ್ತನ್ನು ಬಲತ್ಕಾರವಾಗಿ ಸ್ವಾಧೀನಕ್ಕೆ ಪಡೆದುಕೊಂಡಿಲ್ಲ, ಆಕ್ರಮಣವನ್ನು ಮಾಡಿರುವುದಿಲ್ಲ. ದಾವಾ ಎ ಶೆಡ್ಯೂಲ್ ಸ್ವತ್ತಿನಲ್ಲಿ ನನ್ನ ತಂದೆಗೆ **1982-1983** ರಲ್ಲಿ ಹಕ್ಕು ಬಂದಿದೆ. ಗುಲಾಬಿ ಹೆಗ್ಗಡೆ ಬರೆದುಕೊಟ್ಟಿರುವ ಕ್ರಯ ಪತ್ರದ ಪ್ರಕಾರ ಹಕ್ಕು ಬಂದಿದೆ. **19-08-1995** ರಂದು ದಾವಾ ಎ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ಹಾಗೆ ಹಕ್ಕು ಪ್ರಾಪ್ತವಾಗಿದೆ ಎಂದು ವಕೀಲರಿಗೆ ಮಾಹಿತಿ ನೀಡಲಿಲ್ಲ. **19-08-1995** ನೇ ಇಸವಿಯಲ್ಲಿ ಹಕ್ಕು ಬಂದಿದೆ ಎಂದು ಲಿಖಿತ ಪತ್ರದಲ್ಲಿ ಕಾಣಿಸಿದ್ದೇನೆ ಎಂದರೆ ಸರಿ.

ಈ ದಾವೆಯಲ್ಲಿ ವಾದಿಯು ಹಾಜರುಪಡಿಸಿದ ದಾಖಲೆಗಳನ್ನು ನೋಡಿ ತಿಳಿದುಕೊಂಡಿದ್ದೇನೆ. ನಿ.ಪಿ.**1** ರಪ್ರಕಾರ ಗುಲಾಬಿ ಹೆಗ್ಗಡೆ, ಅವರ ಮಕ್ಕಳು ಮತ್ತು ಮೊಮ್ಮಕ್ಕಳ ಹೆಸರು ಪಹಣಿ ಪತ್ರಿಕೆ ದಾಖಲಾಗಿದೆ ಎಂದು ನನಗೆ ಗೊತ್ತಿದೆ. ನಿ.ಪಿ.**1** ರಲ್ಲಿ ಕ್ರಯಮೂಲಿ ಪ್ರಕಾರ ಹಕ್ಕು ಪಡೆದುಕೊಂಡಿರುವ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿ. ನನ್ನ ತಂದೆ ಕ್ರಯ ಮೂಲಿ ಪ್ರಕಾರ ದಾವಾ ಎ ಶೆಡ್ಯೂಲ್ ಸ್ವತ್ತನ್ನು ಪಡೆದುಕೊಂಡಿದ್ದಾರೆ ಎಂದು ಹೊರತುಪಡಿಸಿ ಬೇರೆ ಹಕ್ಕನ್ನು ಕೇಳುವುದಿಲ್ಲ ಎಂದರೆ ಸರಿ.

ನಿ.ಡಿ.**1** ರಲ್ಲಿ ಹೇಳಿರುವ ಆಸ್ತಿಯನ್ನು ನನ್ನ ತಂದೆಯವರು ಖರೀದಿ ಮಾಡಿದ್ದಾರೆ. ನಿ.ಡಿ **1** ರಲ್ಲಿ ನಮೂದಿಸಿರುವ ಎಲ್ಲಾ ಆಸ್ತಿಗಳು ನನ್ನ ತಂದೆಯವರು ಖರೀದಿ ಮಾಡಿರುವ ಕ್ರಯ ಪತ್ರದಲ್ಲಿ ಒಳಗೊಂಡಿದೆ. ನಿ.ಡಿ.**1** ದಾಖಲೆಯನ್ನು ಬರೆದುಕೊಡುವ ಸಮಯದಲ್ಲಿ ನಾನು ಹಾಜರಿರಲಿಲ್ಲ, ಸಾಕ್ಷಿ ಮುಂದುವರೆದು ನಾನು ಆ ಸಮಯದಲ್ಲಿ ಸಣ್ಣವನಿದ್ದೆ ಎಂದು ನುಡಿಯುತ್ತಾರೆ. ನಿ.ಡಿ.**1** ದಾಖಲೆ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ.

ನಿ.ಡಿ.**2** ದಾಖಲೆ ಬಗ್ಗೆ ಮತ್ತು ಆ ದಾಖಲೆ ಯಾರ ನಡುವೆ ಆಗಿದೆ ಎಂದು ನನಗೆ ಗೊತ್ತಿಲ್ಲ. ನಿ.ಡಿ.**2** ರಲ್ಲಿ ನಮ್ಮ ಮನೆ ದಾವಾ ಎ ಶೆಡ್ಯೂಲ್ ನಲ್ಲಿ ಇದೆ ಎಂದು ಕಂಡುಬರುವ ಕಾರಣ ಹಾಜರುಪಡಿಸಿದ್ದೇನೆ. ನಿ.ಡಿ.**2** ರಲ್ಲಿ ನಮ್ಮ ಮನೆ ದಾವಾ ಎ ಶೆಡ್ಯೂಲ್ ನಲ್ಲಿ ಇದೆ ಎಂದು ಯಾವ ಪುಟದಲ್ಲಿ ನಮೂದಾಗಿದೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ನಿ.ಡಿ.**2** ರಲ್ಲಿ ಎಲ್ಲೂ ಕೂಡ ದಾವಾ ಎ ಶೆಡ್ಯೂಲ್ ನಮ್ಮ ಮನೆಯಿರುವ ವಿಚಾರ ಕಂಡುಬರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ. **2** ದಾಖಲೆಯನ್ನು ಅನಗತ್ಯವಾಗಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಮ್.ಜೆ.ಎಸ್.ರವರಿಂದ</u>**

ಈ ಹಂತದಲ್ಲಿ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮೂಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ, ಕೇ, ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ